**ದಿನಾಂಕ - 04-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 12 ನೇ ಪ್ರತಿವಾದಿಯ ಪರ ಶ್ರೀ ಆರ್.ಕೆ.ಎಸ್ ವಕೀಲರಿಂದಃ**

ನಾನು ವಾದಿ ಒಕ್ಕೂಟದ ಪರವಾಗಿ ವೀಲುನಾಮೆ ಇರುವ ಬಗ್ಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ನನ್ನ ತಂದೆಯಾದ ರುದ್ರಯ್ಯ ಆಚಾರ್ಯ ಸಹಿಯ ಬಗ್ಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ನನ್ನ ತಂದೆ ಚಿನ್ನದ ಅಂಗಡಿ ಹೊಂದಿದ್ದರು. ನಾನು ನನ್ನ ತಂದೆಯ ಉದ್ಯೋಗವನ್ನೇ ಮುಂದುವರಿಸುತ್ತಾ ಇದ್ದೇನೆ. ನನ್ನ ತಂದೆಗೆ ಆರು ಜನ ಮಕ್ಕಳು, ಇಬ್ಬರು ಗಂಡು ಮಕ್ಕಳು ಹಾಗೂ ಉಳಿದವರು ಹೆಣ್ಣು ಮಕ್ಕಳು. ನಾನು ವಾಸ ಮಾಡುವ ಮನೆ ನನ್ನ ತಂದೆಯ ಹೆಸರಿನಲ್ಲೇ ಇರುತ್ತದೆ. ನಾನು ಹಾಗೂ ನನ್ನ ಸಹೋದರ ಒಂದೇ ಮನೆಯಲ್ಲಿ ವಾಸವಿದ್ದೇವೆ. ನನ್ನ ಸಹೋದರಿಯರಿಗೆ ಮದುವೆ ಆಗಿರುತ್ತದೆ.

2. ನನ್ನ ತಂದೆ ವಾದಿ ಒಕ್ಕೂಟದ ಸಕ್ರೀಯ ಸದಸ್ಯರಾಗಿದ್ದರು ಎಂದರೆ ಸರಿ. ಅವರು ಬಾರ್ಕೂರು ಕಾಳಿಕಾಂಬ ದೇವಸ್ಥಾನದ ಟ್ರಸ್ಟೀ ಕೂಡ ಆಗಿದ್ದರು. ಸದರಿ ದೇವಸ್ಥಾನ ಮತ್ತು ವಾದಿ ಒಕ್ಕೂಟಕ್ಕೆ ಸಂಬಂದ ಇಲ್ಲ. ನನ್ನ ತಂದೆ ವಾದಿ ಒಕ್ಕೂಟಕ್ಕೆ ಧನ ಸಹಾಯ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆ ವಾದಿ ಒಕ್ಕೂಟದ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದರು ಎಂದರೆ ಸರಿ. ನನಗೆ ವಾದಿ ಒಕ್ಕೂಟದ ಅನಂತಯ್ಯ ಮತ್ತು ಯೋಗೀಶ್ ರವರ ಪರಿಚಯ ಇದೆ. ನಾನು ವಾದಿ ಒಕ್ಕೂಟದ ಸದಸ್ಯನಲ್ಲ.

3. ನನ್ನ ತಂದೆಗೆ ಮೃತ ಸಂಕ್ರಯ್ಯ ಆಚಾರ್ಯ ರವರ ಪರಿಚಯ ಇತ್ತು. ನನ್ನ ತಂದೆ ಸದರಿಯವರ ಮನೆಗೆ ಹೋಗುತ್ತಿದ್ದರೋ, ಇಲ್ಲವೋ ಗೊತ್ತಿಲ್ಲ. 12 ನೇ ಪ್ರತಿವಾದಿ ಸಂಘದವರು ದಾವಾ ಆಸ್ತಿಯಲ್ಲಿ ಏನಾದರೂ ಚಟುವಟಿಕೆ ಮಾಡುತ್ತಿದ್ದಾರೆಯೋ ಎಂದರೆ ನನಗೆ ಗೊತ್ತಿಲ್ಲ.

4. ನನ್ನ ತಂದೆ 2011 ರಲ್ಲಿ ಮೃತಪಟ್ಟಿದ್ದು, ಮೃತಪಡುವ 02 ತಿಂಗಳು ಮಾತ್ರ ಅವರಿಗೆ ಅಸೌಖ್ಯ ಇತ್ತು. ನನ್ನ ತಂದೆ ಅವರಿಗೆ ಸಂಬಂದಿಸಿದ ದಾಖಲಾತಿಗಳನ್ನು ಪೆಟ್ಟಿಗೆ ಒಳಗೆ ಇಟ್ಟಿದ್ದರು. ನಿಪಿ.14 ರ ಬಗ್ಗೆ ಅವರು ನನ್ನ ಬಳಿ ಚರ್ಚೆ ಮಾಡಿರಲಿಲ್ಲ. ನಾನು ಸದರಿ ನಿಪಿ.14 ವೀಲುನಾಮೆಯನ್ನು ಲಕೋಟೆ ಸಮೇತ ಯೋಗೀಶ್ ಆಚಾರ್ಯ ಎನ್ನುವವರಿಗೆ ನೀಡಿದ್ದೆ. ಸದರಿ ಲಕೋಟೆ ಮಡಚಿ ಇತ್ತು, ನಾನು ಅದನ್ನು ತೆರೆದು ನೋಡಿರುತ್ತೇನೆ. ನಿಪಿ.14 ವೀಲುನಾಮೆ ಎಂದು ಓದಿ ನೋಡಿರುತ್ತೇನೆ. ಸದರಿ ದಾಖಲಾತಿಗೆ ನನ್ನ ತಂದೆ ಸಾಕ್ಷಿ ಸಹಿ ಮಾಡಿದ್ದರು, ಇನ್ನೊಬ್ಬ ಸಾಕ್ಷಿ ಯಾರು ಎಂದು ನಾನು ಗಮನಿಸಲಿಲ್ಲ.

5. ನನಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ನೋಟೀಸು ಬಂದಿತ್ತು. ಸಂಕ್ರಯ್ಯ ಆಚಾರ್ಯರ ಅಂತ್ಯ ಸಂಸ್ಕಾರಕ್ಕೆ ಹಾಗೂ ವೈಕುಂಠ ಸಮಾರಾಧನೆಗೆ ನನ್ನ ತಂದೆ ಹೋಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಸಂಕ್ರಯ್ಯ ಆಚಾರ್ಯರ ವೈಯಕ್ತಿಕ ಪರಿಚಯ ಇಲ್ಲ. ನಿಪಿ.14 ನ್ನು ನನ್ನ ತಂದೆ ನಮ್ಮ ಮನೆಗೆ ತಂದು ಇಟ್ಟಿರಬಹುದು. ನಿಪಿ.14 ವೀಲುನಾಮೆ 2006 ರಿಂದ ನಿಮ್ಮ ತಂದೆ ಮೃತ ಪಡುವ ತನಕ 2011 ರ ತನಕ ನಿಮ್ಮ ಮನೆಯಲ್ಲಿಯೇ ಇತ್ತೇ ಎಂದರೆ ಸಾಕ್ಷಿ, ನಾನು ನನ್ನ ತಂದೆಯ ಪೆಟ್ಟಿಗೆ ತೆರೆದಿರಲಿಲ್ಲ

ಎನ್ನುತ್ತಾರೆ. ನಾನು 2013 ರಲ್ಲಿ ನಿಪಿ.14 ನ್ನು ಯೋಗೀಶ್ ಆಚಾರ್ಯರಿಗೆ ನೀಡಿದ್ದೆನು. ಅಲ್ಲಿಯ ತನಕ ನಿಪಿ.14 ನಮ್ಮ ಮನೆಯಲ್ಲಿಯೇ ಇತ್ತು. ನಿಪಿ.14 ನ್ನು ನನ್ನ ತಂದೆಯ ಮರಣಾನಂತರ ನನ್ನ ತಂದೆಯ ಹಾಗೂ ಸಂಕ್ರಯ್ಯ ಆಚಾರ್ಯರ ಸಹಿಯನ್ನು ಸೃಷ್ಟಿಸಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ.14(ಐ) ನನ್ನ ತಂದೆಯ ಸಹಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 12 ನೇ ಪ್ರತಿವಾದಿ ಸಂಘ ತಮ್ಮ ಚಟುವಟಿಕೆ ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಒಕ್ಕೂಟಕ್ಕೆ ಉಪಕಾರ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 11 ನೇ ಪ್ರತಿವಾದಿಯರ ಪರ ಶ್ರೀ ಎಂ.ಕೆ. ವಕೀಲರಿಂದಃ**

6. ನಾನು ದಾವಾ ಆಸ್ತಿಗೆ ಭೇಟಿ ನೀಡಿರುವುದಿಲ್ಲ. ನನಗೆ 1 ರಿಂದ 11 ನೇ ಪ್ರತಿವಾದಿಯರ ತಂದೆ ರಾಮಯ್ಯ ಆಚಾರ್ಯರ ಪರಿಚಯ ಇಲ್ಲ. ಅಲ್ಲದೇ ತಮ್ಮಯ್ಯ ಆಚಾರ್ಯರ ಪರಿಚಯ ಕೂಡ ಇಲ್ಲ. ನಾನು ಬೇರೆ ಯಾರೊಬ್ಬರ ಕುಮ್ಮಕ್ಕು ಇಲ್ಲದೇ ಸಾಕ್ಷ್ಯ ನುಡಿಯುತ್ತಿದ್ದೇನೆ. ನಾನು ವಾದಿ ಒಕ್ಕೂಟದ ಪರವಾಗಿ ಸಾಕ್ಷ್ಯ ನುಡಿಯುತ್ತಿಲ್ಲ. ಸಂಕ್ರಯ ಆಚಾರ್ಯರ ವಾರೀಸುದಾರರಾದ 1 ರಿಂದ 11 ನೇ ಪ್ರತಿವಾದಿಯರಿಗೆ ದಾವಾ ಆಸ್ತಿ ಸಿಗಬಾರದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.